**ಓ ಎಸ್ ನಂಃ 29/2016**

**ಡಿ. ಡಬ್ಲ್ಯೂ ಃ 1**

**ದಿಃ 29.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಎನ್ ವಕೀಲರಿಂದ ಃ**

ದಾವಾ ಸ್ವತ್ತುಗಳಲ್ಲಿ ರೇವಕ್ಕ ಇವರ ಮಕ್ಕಳ ಮದ್ಯೆ ಯಾವುದೆ ಭಾಗ ಆಗಿಲ್ಲ ಎಂದರೆ ಸರಿ. ಪಾಲನಹಳ್ಳಿ ಗ್ರಾಮದ ಸ್ವತ್ತುಗಳಲ್ಲಿ ದಾಕ್ಷಾಣಮ್ಮ ಇವರಿಗೆ ದಾನಪತ್ರ ಆಗಿದೆ ಎಂದರೆ ಸರಿ. ದಾವೆ ಚಾಲ್ತಿಯಲ್ಲಿರುವಾಗ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ದಾಕ್ಷಾಣಮ್ಮ ರೇವಣ್ಣ ಇವರ ಮೊದಲನೆ ಹೆಂಡತಿ ಮಗಳು ಎಂದರೆ ಸರಿ. ಆ ಸ್ವತ್ತುಗಳು ಕೈ ತಪ್ಪಿನಿಂದ ವಾದಿಯ ಹೆಸರಿನಲ್ಲಿ ಖಾತೆಗಳಾಗಿದ್ದವು ಎಂದರೆ ಸರಿ. ಓ ಎಸ್ 94/2016 ರಲ್ಲಿ ದಾಕ್ಷಾಣಮ್ಮ ಇವರನ್ನುಸೇರಿಸಿಬೇಕೆಂದು ನಾವು ಹಾಕಿದ್ದ ಅರ್ಜಿ ವಜಾ ಆಗಿದೆ ಎಂದರೆ ಸರಿ. ರೇವಣ್ಣ ಮತ್ತು ಅವರ ಹೆಂಡತಿಯರ ಮದ್ಯೆದಲ್ಲಿ ದಿನಾಂಕ ಃ 20.09.1988 ರಲ್ಲಿ ಭಾಗ ಆಗಿತ್ತು ಎಂದರೆ ಸರಿಯಲ್ಲ. ಅದರ ಪ್ರಕಾರ ದಾವಾ ಸ್ವತ್ತುಗಳು ರೇವಕ್ಕ ಇವರ ಭಾಗಕ್ಕೆ ಬಂದಿದ್ದವು ಉಳಿದ ಸ್ವತ್ತುಗಳು ರೇವಣ್ಣ ಇವರ ಮೊದಲ ಹೆಂಡತಿಯ ಭಾಗಕ್ಕೆ ಬಂದಿದ್ದವು ಎಂದರೆ ಸರಿಯಲ್ಲ.

ವಾದಿ ಹಾಜರುಪಡಿಸಿದ ವಿಭಾಗಪತ್ರವನ್ನು ನಾವು ಯಾವುದೆ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ರೇವಕ್ಕ ಇವರು ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿ. ನಿ ಪಿ 2 ರೇವಕ್ಕ ಇವರ ಹೆಸರಿನಲ್ಲಿ ಆದ ಕ್ರಯಪತ್ರ ಎಂದರೆ ಸರಿ. ನಿ ಪಿ 1 ಇದು ರೇವಕ್ಕ ಇವರ ವಂಶವೃಕ್ಷ ಎಂದರೆ ಸರಿ. ನಿ ಪಿ 2 ರಿಂದ ನಿ ಪಿ 8 ರವರೆಗಿನ ದಾಖಲೆಗಳು ರೇವಕ್ಕ ಇವರಿಗೆ ಸಂಬಂಧಿಸಿದ ದಾಖಲೆಗಳೆಂದರೆ ಸರಿ. ರೇವಕ್ಕ ಇವರು ತಟ್ಟೇಕೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನಂಜಮ್ಮ ಇವರು ಪಾಲನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ರೇವಕ್ಕ ಮತ್ತು ನಂಜಮ್ಮ ಇವರು ತಮ್ಮ ಕುಟುಂಬದ ವ್ಯವಹಾರಗಳನ್ನು ಪ್ರತ್ಯೇಕವಾಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಿಭಾಗ ಆದ ನಂತರ ರೇವಕ್ಕ ಮತ್ತು ನಂಜಮ್ಮ ಇವರು ತಮ್ಮ ಕುಟುಂಬದ ವ್ಯವಹಾರವನ್ನು ಪ್ರತ್ಯೇಕವಾಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನಿ ಡಿ 2 ರಲ್ಲಿ ಇರುವ ಮನೆ ಪಂಚಾಯಿತಿಯಲ್ಲಿ ಖಾತೆ ಆಗಿಲ್ಲ ಎಂದರೆ ಸರಿ. ನಿ ಡಿ 1

ಮಾತ್ರ ಪಂಚಾಯಿತಿಯಲ್ಲಿ ಖಾತೆಯಾಗಿದೆ ಎಂದರೆ ಸರಿ. ನಿಡಿ 1 ರಲ್ಲಿ ಇರುವ ಮನೆಯಲ್ಲಿ ನಂಜಮ್ಮ ಇವರು ವಾಸವಾಗಿದ್ದರು. ನಿ ಡಿ 2 ರಲ್ಲಿ ರೇವಕ್ಕ ಇವರು ವಾಸವಾಗಿದ್ದರು ಎಂದರೆ ಸರಿ. ನಿ ಡಿ 1 ರಲ್ಲಿ ಇರುವ ಮನೆ ಈಗ ದಾಕ್ಷಾಣಮ್ಮ ಇವರ ಹೆಸರಿನಲ್ಲಿ ಇದೆ ಎಂದರೆ ಸರಿ. ಅದನ್ನು ದಾವೆ ಚಾಲ್ತಿಯಲ್ಲಿರುವಾಗ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಸ್ವತ್ತು ನಂಜಮ್ಮ ಇವರ ಭಾಗಕ್ಕೆ ಹೋಗಿತ್ತು ಎಂದರೆ ಸರಿಯಲ್ಲ. ಅವರ ಮದ್ಯೆ ವಿಭಾಗವಾಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ರೇವಕ್ಕ ಇವರ ಹೆಸರಿನಲ್ಲಿದ್ದ ಸ್ವತ್ತುಗಳು ಈಗ ನಮ್ಮ ತಾಯಿಯ ಹೆಸರಿನಲ್ಲಿ ಆಗಿವೆ ಎಂದರೆ ಸರಿ. ಆ ಸ್ವತ್ತುಗಳಲ್ಲಿ ಕೆಲವು ಸ್ವತ್ತುಗಳನ್ನು ನಾವು ಮಾರಾಟ ಮಾಡಲು ಪ್ರಯತ್ನ ಮಾಡಿದ್ದೇವು ಎಂದರೆ ಸರಿಯಲ್ಲ. ಆ ಸ್ವತ್ತುಗಳಲ್ಲಿ ವಾದಿ ಭಾಗ ಕೊಡಲು ಕೇಳಿದ್ದರು ಎಂದರೆ ಸರಿ. ನಂತರ ಸಾಕ್ಷಿ ಅವರ ನಮ್ಮ ಜೊತೆ ಭಾಗದ ವಿಚಾರವಾಗಿ ಮಾತನಾಡಿಲ್ಲ ಎಂದು ಹೇಳುತ್ತಾರೆ.

ದಾವಾ ಸ್ವತ್ತಿನಲ್ಲಿ ವಾದಿಗೆ ಅರ್ಧ ಭಾಗದ ಹಕ್ಕು ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಅವರ ತಾಯಿಯ ಭಾಗದಲ್ಲಿ ಹಕ್ಕು ಇದೆ, ತಾತನ ಭಾಗದ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ಹೇಳುತ್ತಾರೆ. ತಾತನ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಸಮಭಾಗದ ಹಕ್ಕು ಇದೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಪಾಲನಹಳ್ಳಿ ಗ್ರಾಮದ ಆಸ್ತಿಗಳನ್ನು ನಂಜಮ್ಮ ಇವರ ಭಾಗಕ್ಕೆ ಹೋಗಿಲ್ಲ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲನಹಳ್ಳಿ ಸ್ವತ್ತುಗಳಲ್ಲಿ ವಾದಿ ಹಾಗೂ ದಾವಾ ಸ್ವತ್ತುಗಳಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲನಹಳ್ಳಿ ಸ್ವತ್ತುಗಳಲ್ಲಿ ನಂಜಮ್ಮನ ವಾರಸುದಾರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಅವರಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**